ಒಟ್ಟು ನಾಲ್ಕು ಬ್ಯಾಜ್‌ಗಳಲ್ಲಿ 60 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ, ಶುಗರ್ ಮತ್ತು ಪೇಪರ್ ಟೆಕ್ನಾಲಜಿಯಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದಿರುತ್ತಾರೆ. ಇವರಿಗೆ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳಲ್ಲಿ ಉದ್ಯೋಗ ಸಿಗಬೇಕು.

ಈ ದಿಸೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯು, ಡೈರೆಕ್ಟರ್ ಆಫ್ ಷುಗರ್ ಇವರ ಮುಖಾಂತರ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ಕೊಡಿಸಲು ಪ್ರಯತ್ನ ಪಡುತ್ತಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭದ್ರಾವತಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಜೊತೆ ಸಮಾಲೋಚಿಸಿ ಭದ್ರಾವತಿಯಲ್ಲಿರುವ ಸಕ್ಕರೆ ಮತ್ತು ಕಾಗದ ಕಾರ್ಖಾನೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಇವರಿಗೆ ಉದ್ಯೋಗ ನೀಡಲು ಪ್ರಯತ್ನಿಸಲಾಗುತ್ತಿದೆ.

ಈ ಡಿಪ್ಲೋಮಾದಾರಕರಲ್ಲಿ ಕೆಲವರು ಬಿ.ಇ. ವ್ಯಾಸಂಗವನ್ನು ಮುಂದುವರಿಸುತ್ತಿದ್ದಾರೆ. ನಿರುದ್ಯೋಗ ಡಿಪ್ಲೋಮಾದಾರಕರಿಗೆ ಅಡಿಷನಲ್ ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಕೋರ್ಸಿಗೆ ಪ್ರವೇಶಾವಕಾಶ ನೀಡಲು ಪ್ರಯತ್ನಿಸಲಾಗುತ್ತಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಪ್ರಯತ್ನವನ್ನು ಮುಂದುವರಿಸಿ ಇವರಿಗೆ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳಲ್ಲಿ ಉದ್ಯೋಗ ದೊರಕುವಂತೆ ಪ್ರಯತ್ನಿಸುತ್ತಿದ್ದೇವೆ.

3) ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಲು, ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ ಯಗಚಿ ಅಣೆಕಟ್ಟಿನಿಂದ ಶಾಶ್ವತ ಕುಡಿಯುವ ನೀರು ಒದಗಿಸಿಕೊಡುವುದು

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೇ, ಚಿಕ್ಕಮಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಸಮಸ್ಯೆ ಬಗೆಹರಿಸಲು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ ಯುಗಚಿ ಅಣೆಕಟ್ಟಿನಿಂದ ಶಾಶ್ವತ ಕುಡಿಯುವ ನೀರು ಒದಗಿಸಲು ಸರ್ಕಾರ ನಿರ್ಣಯಿಸಿ 1990-91ರ ಬಜೆಟ್‌ನಲ್ಲಿ 7.5 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಂಜೂರುಮಾಡುತ್ತಿದೆ.

ಕುಡಿಯುವ ನೀರಿನ ಪೂರೈಕೆಯನ್ನು ಸರ್ಕಾರವು ಬ್ಯಾಕ್ ವಾಟರ್‌ನಿಂದ ಕೊಡುತ್ತದೆಯೋ ಅಥವಾ ಹೆಡ್ ವಾಟರ್‌ನಿಂದ ಕೊಡಲು ನಿರ್ಧರಿಸಿದೆಯೇ ಎಂಬ ಉತ್ತರವನ್ನು ಸರ್ಕಾರದಿಂದ ನಿರೀಕ್ಷಿಸುತ್ತೇನೆ. ಹಾಗೂ ಯೋಜನೆಯ ಕಾರ್ಯ ಆರಂಭ ಯಾವಾಗ ಪ್ರಾರಂಭವಾಗುತ್ತದೆ ಎಂಬುದನ್ನು ದಯವಿಟ್ಟು ಮಾನ್ಯಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಚಿಕ್ಕಮಗಳೂರು ಪಟ್ಟಣ ಚಿಕ್ಕಮಗಳೂರು ಜಿಲ್ಲೆಯ ಕೇಂದ್ರವಾಗಿರುತ್ತದೆ. 1981 ಜನಗಣತಿಯ ಪ್ರಕಾರ 68571 ಜನಸಂಖ್ಯೆ ಇದ್ದು, ಹಾಲಿ ಜನಸಂಖ್ಯೆಯು 80,000 ಸಾವಿರ ಇರಬಹುದು. ಪ್ರಸ್ತುತ ಚಿಕ್ಕಮಗಳೂರು ಕುಡಿವ ನೀರನ್ನು ಹೀರೇಕೊಳಲು ಟ್ಯಾಂಕ್ ಮತ್ತು ಹೊನ್ನಮ್ಮನಹಳ್ಳಿಯಿಂದ ಸರಬರಾಜು ಮಾಡಲಾಗುತ್ತಿದೆ. ಹಾಲಿ ಯೋಜನೆಯು ರೂ. 80 ಲಕ್ಷಗಳಿಗೆ ಸರ್ಕಾರದ ಪತ್ರದ ಸಂಖ್ಯೆ ಎನ್.ಇ. 20 ಯು.ಡಬ್ಲು.ಎಸ್. 86 ದಿನಾಂಕ 28-10-86ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ಈ ಯೋಜನೆಯಲ್ಲಿಯ ಎಲ್ಲಾ ಕಾಮಗಾರಿಗಳು ಮುಗಿದಿದ್ದು, 1988ರಲ್ಲಿ ಪ್ರಾರಂಭಿಸಲಾಯಿತು. ಈಯೋಜನೆಯಲ್ಲಿ ಹೊನ್ನಮ್ಮನ ಹಳ್ಳದಿಂದ ಬರುವ ನೀರನ್ನು ಹೀರೇಕೊಳ್ಳಲು ಟ್ಯಾಂಕ್ ನಲ್ಲಿ ಶೇಖರಿಸಲಾಗುತ್ತಿದೆ.

ಹಾಲಿ ಇರುವ ಮೊದಲನೇ ಹಂತದ ಯೋಜನೆಯನ್ನು ಹೀರೇಕೊಳಲು ಟ್ಯಾಂಕಿನಲ್ಲಿ ನೀರಿನ ಮಟ್ಟ ಕಡಿಮೆಯಾದಾಗ ಬೇಸಿಗೆ ಕಾಲದಲ್ಲಿ ಕುಡಿಯುವ ನೀರನ್ನು ಪೂರೈಸಲಾಗುವುದು. ಆದಾಗ್ಯೂ ಖಾತುಮಾನಪೂರ್ತಿ ಹೊನ್ನಮ್ಮನ್ನಹಳ್ಳದಲ್ಲಿನ ನೀರನ್ನು ಪೂರ್ತಿಯಾಗಿ ಉಪಯೋಗಿಸಲು ಕೊಳವೆ ಮಾರ್ಗವನ್ನು ಪಟ್ಟಣದಲ್ಲಿನ ಕೇಂದ್ರ ಸರ್ಕಾರದವರು ವಿಸ್ತರಿಸಿರುವುದರಿಂದ ಹೀರೇಕೊಳಲು ಟ್ಯಾಂಕ್‌ನಲ್ಲಿರುವ ನೀರನ್ನು ಬೇಸಿಗೆ ಕಾಲದಲ್ಲಿ ನೀರಿನ ಅಭಾವವನ್ನು ಪರಿಹರಿಸಲು ಉಪಯೋಗಿಸಬಹುದು. ಇದಕ್ಕನುಗುಣವಾಗಿ ರೂ.88 .10 ಟನ್‌ಗಳಿಗೆ ಒಂದು ಯೋಜನೆಯನ್ನು ತಯಾರಿಸಿ ಸರ್ಕಾರದಿಂದ ಮಾರ್ಚಿ 1990ರಲ್ಲಿ ಜೀವವಿಮಾ ನಿಗಮದ ಆರ್ಥಿಕ ನಿಲುವಿನಡಿಯಲಿ ಮಂಜೂರಾತಿ ಪಡೆಯಲಾಯಿತು. ಈ ಯೊಜನೆ ಕಾರ್ಯಪ್ರಗತಿಯಲ್ಲಿದೆ.

ಈ ಯೋಜನೆಯಿಂದ ಕೂಡಾ ಬಹಳ ಕಾಲದವರೆಗೂ ಕುಡಿಯುವ ನೀರಿನ ಅಭಾವನ್ನು ಬಗೆಹರಿಸಲಾಗುವುದಿಲ್ಲ. ಅದಕಾರಣ ಹೆಚ್ಚುವರಿ ನೀರು ಸರಬರಾಜು ಮಾಡುವ ಯೋಜನೆಯನ್ನು ರೂ. 730ಲಕ್ಷಕ್ಕೆ ಯಗಚ್ಚಿ ಹಣಕಟ್ಟನ್ನು ಮೂಲವಾಗಿಟ್ಟುಕೊಂಡು ರೂಪಿಸುವುದು ಸರ್ಕಾರದ ತೀರಪರಿಶೀಲನೆಯಲ್ಲಿದೆ.

4) ಸಹಕಾರ ಇಲಾಖೆಯ ನೌಕರರ ಹೌಸಿಂಗ್ ಸೊಸೈಟಿಯಿಂದ ದಿವಂಗತ ಶೌಕತ್ ಮೆಹದಿಯವರಿಗೆ ಹಂಚಿಕೆಯಾದ ನಿವೇಶನ

SREE. SADAT ALIKHAN (CHANNAPATNA): Mr Speaker: Sir The Hon'ble Minister for Cooperation be pleased to answer that Sri late Shoukat Mehdi Assist.Controler of Weights and Measures No.142, Rizwana Manzil, Channapatna was an active member of the Coop.Department Employees Housing Coop.Society Ltd., No.1, Ali Askar Road, Bangalore-52. He was alloted site No.2245 measuring 40' X 70' in R.P.C. Layout Hosahally, by the board meeting held on 29.4.76.

The Society in their next meeting on 30.2.1981 have cancelled the allottment of site no.2245 on a plea that he was a defaulter and the same site was allotted to one Sri Mahalingam and site No.2224, previously allotted to Sri. Mahalingam was allotted to Sri Rone (the Secretary of the Society). This is not only a mischief but it is a clear case of cheating.

Sri Soukat Mehdi died of Heart attack on 12.5.1981 left behind his wodow and single daughter who are struggling for the livelihood with a meagre family pension they are getting now.

Though many defaulters among the directors are allowed to have sites why site No.2245 allotted to Sri Shoukat Mehdi was cancelled?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು): ಮಾನ್ಯ ಸಭಾಧ್ಯಕ್ಷಣೆಯವರೇ, ಸಹಕಾರ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು ಇದರಲ್ಲಿ ದಿವಂಗತ ಶ್ರೀ ಶಾಕತ್ ಮೆಹದಿಯವರು ಸದಸ್ಯರಾಗಿದ್ದು, ಇವರಿಗೆ ದಿನಾಂಕ 25-4-76 ರಲ್ಲಿ ನಡೆದ ಸಂಘದ ಕಾರ್ಯಕಾರಿ ಸಮಿತಿಯ ತೀರ್ಮಾನದ ಸಂಖ್ಯೆ 4 ರಂತೆ 40.70 ಅಡಿಗಳ ವಿಸ್ತೀರ್ಣವುಳ್ಳ 2245 ನೇ ಕ್ರಮಸಂಖ್ಯೆ ನಿವೇಶನ ಹಂಚಿರುವುದು ನಿಜವಿದ್ದು, ಈ ನಿವೇಶನದ ಬೆಲೆಯೂ ರೂ.10,000-00ಆಗಿದ್ದು, ಶ್ರೀ ಶೌಕತ್